C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No. 162/2019 ಸಿ. ಡಬ್ಲ್ಯೂ- 1 ಪಿ. ಡಬ್ಲ್ಯೂ -1

ದಿನಾಂಕ : 13.09.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಜವರೇಗೌಡ |
| ತಂದೆಯ ಹೆಸರು | ಲೇಟ್ ಮಂಚೇಗೌಡ |
| ವಯಸ್ಸು | 38 ವರ್ಷ |
| ಉದ್ಯೋಗ | ವ್ಯವಸಾಯ ಹಾಗೂ ಟ್ರಾಕ್ಟರ್ ಚಾಲಕ |
| ವಾಸ | ಮಾದೇಗೌಡನಕೊಪ್ಪಲು ಗ್ರಾಮ |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

1. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ಪುಟ್ಟಿಕೊಪ್ಪಲು ಗ್ರಾಮಕ್ಕೆ ನೀರು ಸರಬರಾಜು ಮಾಡಬೇಕೆಂದು ಆರೋಪಿ ನನಗೆ ಒಂದು ಪತ್ರವನ್ನು ಬರೆದಿದ್ದರು. ದಿಃ 25.07.2016 ರಿಂದ ಪ್ರತಿದಿನ ಸದರಿ ಗ್ರಾಮಕ್ಕೆ 2 ಲೋಡು ನೀರು ಸರಬರಾಜು ಮಾಡಬೇಕೆಂದು ನನ್ನನ್ನು ಕೋರಲಾಗಿತ್ತು. ಅದರಂತೆ ನಾನು ವಾಟರ್ ಟ್ಯಾಂಕು ಮೂಲಕ ಸದರಿ ಗ್ರಾಮಕ್ಕೆ 17 ದಿನ ನೀರು ಸರಬರಾಜು ಮಾಡಿದ್ದೆನು. ಅದರ ಬಾಬ್ತು 34,600/- ರೂಗಳನ್ನು ಮಾರನಚಾಕನಹಳ್ಳಿ ಗ್ರಾಮ ಪಂಚಾಯತಿಯವರು ನನಗೆ ಕೊಡಬೇಕಾಗಿತ್ತು. ಸದರಿ ಹಣ ಬಿಡುಗಡೆ ಮಾಡಲು ಆರೋಪಿ ತನಗೆ 10,000/- ರೂ ಲಂಚ ಕೊಡಬೇಕೆಂದು ನನಗೆ ಫೋನ್ ಮಾಡಿ ಹೇಳಿದ್ದರು. ದಿಃ 13.09.2016 ರಂದು ಆ ರೀತಿ ಆರೋಪಿ ನನಗೆ ಫೋನ್ ಮೂಲಕ ಲಂಚದ ಹಣವನ್ನು ಕೇಳಿದ್ದರು. ನನ್ನ ಮೊಬೈಲ್ ನಂಬರ್ 9880490803 ಆಗಿರುತ್ತದೆ. ಆರೋಪಿ ಆ ರೀತಿ ಲಂಚ ಕೇಳಿದ್ದನ್ನು ನಾನು ಮೊಬೈಲ್ ನಲ್ಲಿ ರೆಕಾರ್ಡ ಮಾಡಿಕೊಂಡೆನು. ದಿಃ14.09.2016 ರಂದು ನಾನು ಎಸಿಬಿ ಕಚೇರಿಗೆ ಹೋಗಿ ಆರೋಪಿಯ ವಿರುದ್ದ ದೂರು ಕೊಟ್ಟೆನು. ನನ್ನ ದೂರನ್ನು ಎಸಿಬಿ ಕಚೇರಿಯಲ್ಲಿ ಸ್ವೀಕರಿಸಿದರು. ಸದರಿ ದೂರನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ.1 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

2. ನಾನು ದೂರು ಕೊಟ್ಟ ನಂತರ ಎಸಿಬಿ ಅಧಿಕಾರಿಗಳು ಪ್ರಕಾಶ ಹಾಗೂ ರಾಘವೇಂದ್ರ ಎನ್ನುವ ಇಬ್ಬರು ಅಧಿಕಾರಿಗಳನ್ನು ತಮ್ಮ ಕಚೇರಿಗೆ ಕರೆಸಿ ನನ್ನ ಪರಿಚಯವನ್ನು ಅವರಿಗೆ ಮಾಡಿಕೊಟ್ಟರು. ಆರೋಪಿ 10,000/- ರೂ ಲಂಚ ಕೇಳಿದ ಬಗ್ಗೆ ನಾನು ಅವರಿಗೆ ಹೇಳಿದೆನು. ದೂರಿನೊಂದಿಗೆ ನಾನು

ಮೊಬೈಲ್ ನಲ್ಲಿ ರೆಕಾರ್ಡ ಮಾಡಿಕೊಂಡಿದ್ದನ್ನು ಎಸಿಬಿ ಅಧಿಕಾರಿಗಳಿಗೆ ಕೊಟ್ಟೆನು. ಮೊಬೈಲ್ ನಲ್ಲಿ ರೆಕಾರ್ಡ ಆಗಿದ್ದನ್ನು ಕಂಪ್ಯೂಟರ್ ಗೆ ಹಾಕಿ ಅದನ್ನು ಸಿಡಿಗೆ ಹಾಕಿದರು. (ಸೀಲಾದ ಪ್ಯಾಕೆಟ್ಟನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು). ಅದರಲ್ಲಿರುವ ಸಿಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಿಡಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ನನ್ನ ಮೊಬೈಲ್ ನ ಚಿಪ್ಪನ್ನು ಆ ಸಮಯದಲ್ಲಿ ವಶಪಡಿಸಿಕೊಂಡರು. (ಸೀಲಾದ ಪ್ಯಾಕೆಟ್ಟನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು). ಅದರಲ್ಲಿರುವ ಚಿಪ್ಪನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಚಿಪ್ಪನ್ನು ನಿಪಿ-3 ಎಂದು ಗುರುತಿಸಲಾಯಿತು.

3. ನನ್ನ ಬಳಿ ಇದ್ದ ತಲಾ 2,000/- ರೂಗಳ 5 ನೋಟುಗಳನ್ನು ನಾನು ಎಸಿಬಿ ಅಧಿಕಾರಿಗಳ ಮುಂದೆ ತೆಗೆದು ಕೊಟ್ಟೆನು. ಸದರಿ ನೋಟುಗಳಿಗೆ ಎಸಿಬಿ ಅಧಿಕಾರಿಗಳು ಪೌಡರ್ ಲೇಪಿಸಿದರು. ಸದರಿ ನೋಟುಗಳ ನಂಬರುಗಳನ್ನು ಸಾಕ್ಷಿ ಪ್ರಕಾಶ ಹೇಳಿದಂತೆ ಸಾಕ್ಷಿ ರಾಘವೇಂದ್ರ ಬರೆದುಕೊಂಡರು. ಸಾಕ್ಷಿ ರಾಘವೇಂದ್ರ ನನ್ನ ಪ್ಯಾಂಟು, ಶರಟಿನ ಜೇಬುಗಳನ್ನು ಚೆಕ್ ಮಾಡಿದರು. ಸಾಕ್ಷಿ ಪ್ರಕಾಶ ಪೌಡರು ಲೇಪಿಸಿದ್ದ ನೋಟುಗಳನ್ನು ನನ್ನ ಶರಟಿನ ಎಡಜೇಬಿಗೆ ಇರಿಸಿದರು. ಸಾಕ್ಷಿ ಪ್ರಕಾಶ ರವರ ಕೈಯನ್ನು ನೀರಿನಲ್ಲಿ ತೊಳೆಸಿದಾಗ ಅದು ಕೆಂಪು ಬಣ್ಣಕ್ಕೆ ತಿರುಗಿತು. ಸದರಿ ಕೆಂಪು ಬಣ್ಣದ ದ್ರಾವಣವನ್ನು ಎಸಿಬಿ ಅಧಿಕಾರಿಗಳು ವಶಪಡಿಸಿಕೊಂಡರು. ಸಾಕ್ಷಿಯು ಸ್ವತಃ ನುಡಿಯವುದೇನೆಂದರೆ ನನಗೆ ಘಟನೆ ನಡೆದ ವರುಷ ಗಾಬರಿಯಲ್ಲಿ ಕನ್ಫೂಸ್ ಆಗಿದ್ದು, ಅದು ನಾನು ಹೇಳಿದಂತೆ 2016 ಅಲ್ಲ 2017 ಆಗಿದೆ.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.